ಸಮ್ಮರ್ ಸ್ಟೈಲ್

# ಬಿಸಿಲ ತಾಪಕ್ಕೆ ಕೂಲ್ ಫ್ಯಾಷನ್!

ಬಿಸಿಲ ಧಗೆಯಲ್ಲಿ ಆರಾಮದಾಯಕವೆನಿಸುವ ಜೊತೆಗೆ ಫ್ಯಾಷನಬಲ್ ಆಗಿ ಕಾಣಿಸಿಕೊಳ್ಳಲು ಹಲವು ನಮೂನೆಯ ಉಡುಪುಗಳು ಟ್ರೆಂಡ್‌ನಲ್ಲಿವೆ. ಯುವತಿಯರ ಮೆಚ್ಚುಗೆ ಗಿಟ್ಟಿಸಿಕೊಂಡಿರುವ ಈ ಟ್ರೆಂಡಿ ಉಡುಪುಗಳು ಬೇಸಿಗೆ ಕಾಲಕ್ಕೆ ಒಳ್ಳೆ ಆಯ್ಕೆಯೂ ಆಗಿವೆ.



■ ಸುಮಲತಾ ಎನ್‌.

ಬಿಸಿಲ ತಾಪದ ನಡುವೆ ಹೊರಗೆ ಓಡಾಡುವುದು ಅತಿ ಬೇಸರದ ಸಂಗತಿ ಎನಿಸಿಬಿಡುತ್ತದೆ. ಸಹಿಸಲಸಾಧ್ಯವಾದ ಶಾಖದಿಂದ ದೇಹಕ್ಕೆ ಕಿರಿಕಿರಿ. ಇದರೊಂದಿಗೆ ತೊಡುವ ಬಟ್ಟೆಯೂ ಹವಾಮಾನಕ್ಕೆ ತಕ್ಕಂತಿರದಿದ್ದರೆ ಆ ಕಿರಿಕಿರಿ ಇನ್ನಷ್ಟು ಹೆಚ್ಚು.

ಹೀಗಾಗಿ ಬೇಸಿಗೆ ಕಾಲದಲ್ಲಿ ದೇಹಕ್ಕೆ ಹಿತಕರವೆನಿಸುವ ಜೊತೆಗೆ ಫ್ಯಾಷನಬಲ್ ಆಗಿಯೂ ಕಾಣಿಸಬಲ್ಲ ಉಡುಪುಗಳನ್ನು ತೊಡಬೇಕು ಎಂದು ಯುವತಿಯರು ಬಯಸುತ್ತಾರೆ. ಇಂಥ ಫ್ಯಾಷನ್‌ಪ್ರಿಯ ಯುವತಿಯರಿಗೆಂದೇ ಹೆಚ್ಚೆಚ್ಚು ಆಯ್ಕೆಗಳು ಕೂಡ ಲಭ್ಯವಿವೆ.

ಕಳೆದ ಎರಡು ವರ್ಷಗಳಿಂದ ಕೊರೊನಾ ಸೋಂಕಿನ ಕಾರಣವಾಗಿ ನೀಡಿದ್ದ ‘ವರ್ಕ್ ಫ್ರಂ ಹೋಂ’ ತೆರವಾಗಿ ಕಚೇರಿಗೆ ಹೋಗುವುದು ಆರಂಭವಾಗಿದೆ. ಮತ್ತೆ ಎಲ್ಲಾ ಕ್ಷೇತ್ರಗಳಲ್ಲೂ ಚಟುವಟಿಕೆಗಳು ಶುರುವಾಗಿವೆ. ಈ ಎರಡು ವರ್ಷಗಳ ಅವಧಿಯಲ್ಲಿ ಕುಸಿತವಾಗಿದ್ದ ಫ್ಯಾಷನ್ ಡಿಸೈನಿಂಗ್ ಕ್ಷೇತ್ರವೂ ಚೇತರಿಸಿಕೊಳ್ಳುತ್ತಿದ್ದು, ಹೊಸ ನಮೂನೆ ವಸ್ತ್ರ ವಿನ್ಯಾಸಗಳತ್ತ ವಿನ್ಯಾಸಕರು ಚಿತ್ತ ಹರಿಸಿದ್ದಾರೆ.

ಈ ಸುಡು ಬಿಸಿಲಿನಲ್ಲಿ ಹಾಯೆನಿಸುವುದರ ಜೊತೆಗೆ ಫ್ಯಾಷನಬಲ್ ಆಗಿರುವ ಕೆಲವು ವಸ್ತ್ರ ಪ್ರಯೋಗಗಳು ಟ್ರೆಂಡ್ ಸೃಷ್ಟಿಸಿವೆ.

‘ ಈಗ ಎಲ್ಲಾ ರೀತಿಯ ಫ್ಯಾಷನಬಲ್ ಉಡುಪುಗಳೂ ಕಾಟನ್ ಬಟ್ಟೆಗಳಲ್ಲಿ ಲಭ್ಯವಿವೆ. ಬೇಸಿಗೆ ಹೆಚ್ಚಿರುವ ಈ ಎರಡು ತಿಂಗಳುಗಳಲ್ಲಿ ಆದಷ್ಟೂ ಹತ್ತಿ ಬಟ್ಟೆಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಒಳಿತು.

-ಸರೋಜಿನಿ ಹೊಂಬಾಳಿ, ವಸ್ತ್ರವಿನ್ಯಾಸಕಿ

